ಆ) ಸದರಿ ಕಾಮಗಾರಿಯನ್ನು ರೂ. 2121.11 ಲಕ್ಷ ಗುತ್ತಿಗೆ ಮೊತ್ತಕ್ಕೆ, ನವೆಂಬರ್ 2003ರಲ್ಲಿ ಪೂರ್ಣಗೊಳಿಸಲು ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು.

ಇ) ಇನ್ನು ಪೂರ್ಣಗೊಂಡಿರುವುದಿಲ್ಲ.

ಈ) 1. ನದಿಯಲ್ಲಿ ಎರಡು ಬಾರಿ ಅಕಾಲಿಕ ಪ್ರವಾಹ ಬಂದಿರುವುದರಿಂದ.

2. ಕಾಮಗಾರಿ ಅಡಿಯ ಕೆಲವು ಅವಶ್ಯಕ ಐಟಂಗಳು ಮೂಲ ಅಂದಾಜಿನಲ್ಲಿ ಇಲ್ಲದಿರುವುದರಿಂದ ಅದಕ್ಕೆ ಅನುವೋದನೆಯೊಂದಿಗೆ ಕೈಗೊಳ್ಳಬೇಕಾಗಿರುವುದರಿಂದ,

3. ಬ್ಯಾರೇಜ್ ಹತ್ತಿರ ಉದ್ದೇಶಿಸಲಾಗಿರುವ ಮಿನಿ ಹೈಡಲ್ ಯೋಜನೆ ಕುರಿತು ತಾಂತ್ರಿಕ ನಿರ್ಧಾರಗಳು ಕೈಕೊಳ್ಳಬೇಕಾಗಿರುವುದರಿಂದ, ಹಾಗೂ ಮುಂತಾದವುಗಳು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ಋ) ನಿಜ,

ಋೂ) ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

888(623) ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯ ಲಿಂಗಸಗೂರು ಮತ್ತು ದೇವದುರ್ಗ ತಾಲ್ಲೂಕಿನಲ್ಲಿ ಬಂಗಾರದ ಗಣಿಗಳು ಪ್ರಾರಂಭಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ ಗಣಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು (ದರ್ಜೆವಾರು ವಿವರ ನೀಡುವುದು);

ಇ) ಹಾಗಿದ್ದಲ್ಲಿ, ಮೀಸಲಾತಿ ನಿಯಮವನ್ನು ಅಳವಡಿಸಲಾಗಿದೆಯೇ (ವಿವರವಾದ ದರ್ಜೆವಾರು ಮಾಹಿತಿ ನೀಡುವುದು);

ಈ) ಸದರಿ ಗಣಿಯಲ್ಲಿ ವಿ.ಆರ್.ಎಸ್. ಪಡೆದ ನೌಕರರ ಸಂಖ್ಯೆ ಎಷ್ಟು;

ಉ) ವಿ.ಆರ್.ಎಸ್. ಪಡೆದವರು ಪುನಃ ನೌಕರಿಗೆ ಹಟ್ಟಿ ಮತ್ತು ಊಟಿ ಗಣಿಗಳಲ್ಲಿ ಉದ್ಯೋಗ ಪಡೆದ ನೌಕರರ ಸಂಖ್ಯೆ ಎಷ್ಟು (ದರ್ಜೆವಾರು ಮಾಹಿತಿ ನೀಡುವುದು);

ಊ) ಅಂತಹ ನೌಕರರು ಪುನಃ ನೌಕರಿಗೆ ಸೇರಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆಯೇ ಹಾಗೂ ಇದ್ದರೆ ಯಾವ ನಿಯಮದಲ್ಲಿ ಇರುತ್ತದೆ;

ಋ) ಕಳೆದ ಮೂರು ವರ್ಷಗಳಿಂದ ಹಟ್ಟಿ ಮತ್ತು ಊಟಿ ಚಿನ್ನದ ಗಣಿಯಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವುದಾಗಿ ಸರ್ಕಾರ ತಿಳಿಸಿರುವುದು ನಿಜವೇ;

ಎ) ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಜನರನ್ನು ಉದ್ಯೋಗಕ್ಕೆ ನೇಮಕ ಮಾಡಿಕೊಳ್ಳಲಾಗಿದೆ;

ಏ) ಹೂಟಿ ಚಿನ್ನದ ಗಣಿ ಗುತ್ತಿಗೆದಾರರಿಗೆ ದರಪಟ್ಟಿಗಿಂತ (ಡಿಎಸ್‌ಆರ್) ಹೆಚ್ಚುವರಿಯಾಗಿ ಪರ್‌ಕ್ಯೂಬಿಕ್ ಮೀಟರ್ ಹೆಚ್ಚು ಹಣಕ್ಕೆ ಗುತ್ತಿಗೆ ನೀಡಿರುವುದು ನಿಜವೇ;

ಐ) ಹಾಗಿದ್ದಲ್ಲಿ, ಅಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ದಿನಾಂಕ 31.12.2004ರಂದು ಇದ್ದಂತೆ ನೌಕರರ/ಅಧಿಕಾರಿಗಳ ಸಂಖ್ಯೆಯು ಈ ಕೆಳಗಿನಂತಿರುತ್ತದೆ:–

ಹಟ್ಟಿ ಚಿನ್ನದ ಘಟಕ	3723
ಊಟಿ/ಹೀರಾ–ಬುದ್ದಿನ್ನಿ ಚಿನ್ನದ ಘಟಕ	307
ಒಟ್ಟು	**4030**

ದರ್ಜೆವಾರು ವಿವರಗಳನ್ನು <u>ಅನುಬಂಧ–ಅ</u> ನಲ್ಲಿ ನೀಡಲಾಗಿದೆ.

ಇ) ಕರ್ನಾಟಕ ಸರ್ಕಾರದ ನಿಯಮದನ್ವಯ ಪ.ಜಾ:ಪ.ಪಂ.ಗಳವರಿಗೆ ಮೀಸಲಾತಿ ನಿಯಮವನ್ನು ಅಳವಡಿಸಲಾಗಿದೆ.

ದರ್ಜೆವಾರು ವಿವರ <u>ಅನುಬಂಧ–ಅ</u> ನಲ್ಲಿ ನೀಡಲಾಗಿದೆ.

ಈ) ಹಟ್ಟಿ ಚಿನ್ನದ ಗಣಿಯಲ್ಲಿ ವಿ.ಆರ್.ಎಸ್.ಪಡೆದ ನೌಕರರ ಸಂಖ್ಯೆ 1071.

ಉ) ಹಟ್ಟಿ ಮತ್ತು ಊಟಿ/ಹೀರಾ–ಬುದ್ದಿನ್ನಿ ಚಿನ್ನದ ಘಟಕಗಳಲ್ಲಿ ವಿ.ಆರ್.ಎಸ್. ಪಡೆದವರಿಗೆ ಪುನಃ ನೌಕರಿ ನೀಡಲಾಗಿಲ್ಲ.

ಊಟಿ/ಹೀರಾ–ಬುದ್ದಿನ್ನಿ ಚಿನ್ನದ ಘಟಕದ ನೌಕರಿಗೆ ಸ್ವಯಂ ನಿವೃತ್ತಿ ಪಡೆದ ನುರಿತ ನೌಕರರಿಂದ ಬ್ಲಾಸ್ಟರ್ ಮತ್ತು ಟಿಂಬರಿಂಗ್ ಕೆಲಸಕ್ಕೆ ತರಬೇತಿ ನೀಡಲು 9 ಸ್ವಯಂ ನಿವೃತ್ತಿ ಯೋಜನೆ ಅಡಿಯಲ್ಲಿ ನಿವೃತ್ತಿ ಹೊಂದಿದ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನಿರ್ದಿಷ್ಟ ಅವಧಿಗೆ ತೆಗೆದುಕೊಳ್ಳಲಾಗಿದೆ. ಅವಧಿಯ ನಂತರ ಗುತ್ತಿಗೆಯಿಂದ ಬಿಡುಗಡೆ ಮಾಡಲಾಗುತ್ತದೆ.

ಊ) ಸ್ವಯಂ ನಿವೃತ್ತಿ ಯೋಜನೆ, 2001ರ ನಿಯಮಗಳನ್ವಯ ನಿವೃತ್ತಿ ಹೊಂದಿದ ನೌಕರರ ಸ್ಥಾನಗಳನ್ನು (ಹಣಕಾಸಿನ ಸೌಲಭ್ಯ ಪಡದವರ) ರದ್ದುಗೊಳಿಸಲಾಗಿದ್ದು ಈ ಹುದ್ದೆಗಳ ಭರ್ತಿಗೆ ಸದರಿ ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ.

ಋ) ಡಾ. ಸರೋಜಿನಿ ಮಹಿಷಿ ವರದಿಯನ್ವಯ ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಲಾಗುತ್ತಿದೆ.

ಎ) ಕಳೆದ 3 ವರ್ಷಗಳಲ್ಲಿ ನೇಮಕ ಮಾಡಿದ ತಾಲ್ಲೂಕುವಾರು ವಿವರಗಳನ್ನು <u>ಅನುಬಂಧ–ಇ</u> ನಲ್ಲಿ ನೀಡಲಾಗಿದೆ.

ಏ) ಇಲ್ಲ.

ಐ) ಉದ್ಭವಿಸುವುದಿಲ್ಲ.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ಅನುಬಂಧ–ಅ

ಹಟ್ಟಿ ಚಿನ್ನದ ಘಟಕ		ಊಟಿ ಹೀರಾ–ಬುದ್ದಿನ್ನಿ ಚಿನ್ನದ ಘಟಕ	
ದರ್ಜೆ	ಸಂಖ್ಯೆ	ದರ್ಜೆ	ಸಂಖ್ಯೆ
ಅಧಿಕಾರಿಗಳು	124		
G-1	22	A-1	4
G-2	65	A-2	10
G-3	148	A-3	16
G-4	101	A-4	16
G-5	208	A-5	53
G-6	168	A-6	20
G-7	529	A-7	7
G-8	801	A-8	181
G-9	421		
G-10	14		
G-11	320		
G-12	802		
Total	**3723**	**Total**	**307**

ಅನುಬಂಧ – ಆ

ದರ್ಜೆವಾರು ವಿವರ

ದರ್ಜೆ	ಒಟ್ಟು ನೌಕರರ ಸಂಖ್ಯೆ	ಪ.ಜಾ.	ಪ.ಪಂ.
ಅಧಿಕಾರಿಗಳು	124	21	6
G-1	22	2	2
G-2	65	14	2
G-3	148	22	4
G-4	101	21	1
G-5	208	43	13
G-6	168	41	12
G-7	529	152	33

G-8	801	199	66
G-9	421	157	26
G-10	14	1	3
G-11	320	73	62
G-12	802	234	127
Total	**3723**	**980**	**357**

ಊಟಿ ಹೀರಾ–ಬುದ್ದಿನ್ನಿ ಚಿನ್ನದ ಘಟಕ

A-1	4	-	1
A-2	10	1	3
A-3	16	-	2
A-4	16	2	1
A-5	53	2	4
A-6	20	3	4
A-7	7	-	-
A-8	181	13	95
Total	**307**	**21**	**110**

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

<u>ಅನುಬಂಧ–ಇ</u>

ರಾಯಚೂರು ಜಿಲ್ಲೆ:		**727**
ಲಿಂಗಸಗೂರು	517	
ಮಾನ್ವಿ	54	
ಸಿಂಧನೂರು	5	
ದೇವದುರ್ಗ	127	
ರಾಯಚೂರು	24	
ಕೊಪ್ಪಳ ಜಿಲ್ಲೆ:		**04**
ಕೊಪ್ಪಳ	2	
ಯಲಬುರ್ಗ	1	
ಕುಷ್ಟಗಿ	1	
ಗುಲ್ಬರ್ಗಾ ಜಿಲ್ಲೆ:		**37**
ಸುರಪುರ	32	
ಗುಲ್ಬರ್ಗಾ	1	
ಚಿತಾಪುರ	1	
ಶಹಾಪುರ	1	

ಜೇವರ್ಗಿ	1	
ಸೇಡಂ	1	
ಬಾಗಲಕೋಟೆ ಜಿಲ್ಲೆ:		**39**
ಬಾಗಲಕೋಟೆ	11	
ಮುಧೋಳ	1	
ಬೀಳಗಿ	2	
ಜಮಖಂಡಿ	2	
ಹುನಗುಂದ	20	
ಬಾದಾಮಿ		
ಬಿಜಾಪುರ ಜಿಲ್ಲೆ:	**13**	
ಬಿ. ಬಾಗೇವಾಡಿ	3	
ಮುದ್ದೇಬಿಹಾಳ	4	
ಇಂಡಿ	2	
ಸಿಂದಗಿ	4	
ಬೆಳಗಾವಿ ಜಿಲ್ಲೆ:	**ರಾಮದುರ್ಗ ತಾ:**	**01**
ಬೆಂಗಳೂರು ಜಿಲ್ಲೆ	**ಬೆಂಗಳೂರು ತಾ:**	**01**
ಗದಗ ಜಿಲ್ಲೆ :		**06**
ಗದಗ	03	
ರೋಣ	03	
ಬಳ್ಳಾರಿ ಜಿಲ್ಲೆ:		**05**
ಬಳ್ಳಾರಿ	01	
ಹೊಸಪೇಟೆ	01	
ಸಿರಗುಪ್ಪಾ	01	
ಸಂಡೂರು	01	
ಕೂಡ್ಲಿಗಿ	01	
ಧಾರವಾಡ ಜಿಲ್ಲೆ:	**ಹುಬ್ಬಳ್ಳಿ ತಾ:**	**01**
ಬೀದರ್ ಜಿಲ್ಲೆ:	**ಬೀದರ್ ತಾ:**	**01**
ಶಿವಮೊಗ್ಗ ಜಿಲ್ಲೆ:		**02**
ಭದ್ರಾವತಿ	01	
ಸೊರಬ	01	
ಹಾವೇರಿ ಜಿಲ್ಲೆ:	**ಹಾವೇರಿ ತಾ:**	**02**
ಕೋಲಾರ ಜಿಲ್ಲೆ:	**ಕೋಲಾರ ತಾ:**	**02**
ಒಟ್ಟು		**841**

841 ನೇಮಕಾತಿಗಳಲ್ಲಿ, ಸ್ವಯಂ ನಿವೃತ್ತಿ ಯೋಜನೆಯಲ್ಲಿ ಹಣಕಾಸಿನ ಸೌಲಭ್ಯಕ್ಕೆ ಬದಲಾಗಿ ಮಕ್ಕಳಿಗೆ ಕೆಲಸ ನೀಡಿರುವುದು 440, ಅನುಕಂಪದ ಆಧಾರದ ಮೇಲೆ 173 ನೌಕರರು, ಭದ್ರತಾ ವಿಭಾಗಕ್ಕೆ (ಮಾಜಿ ಸೈನಿಕರು) 52 ನೌಕರರು, 12 ಪೂರ್ಣಗೊಂಡ ನೌಕರರ ಪುನರ್ ನೇಮಕ, 70 ಭೂಮಿ ಕಳೆದುಕೊಂಡವರಿಗೆ ಮತ್ತು ಸ್ಥಳೀಯರಿಗೆ, 94 ನೇರ ನೇಮಕಾತಿಗೊಂಡ ನೌಕರರು.

890(1522 ಡಾ॥ ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರದಲ್ಲಿ ಹೆಚ್ಚುತ್ತಿರುವ ಅಪರಾಧಗಳ ಪ್ರಮಾಣವನ್ನು ನಿಯಂತ್ರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಅಪರಾಧಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1.ಹಗಲು ರಾತ್ರಿ ಗಸ್ತು ವ್ಯವಸ್ಥೆಯನ್ನು ಠಾಣಾ ವ್ಯಾಪ್ತಿಯಲ್ಲಿ ಬಿಗಿಗೊಳಿಸಲಾಗಿದೆ.

2. ಚೇತಾ ಮತ್ತು ಹೊಯ್ಸಳ ವಾ್ನಗಳ ಗಸ್ತು ವ್ಯವಸ್ಥೆ ಹಗಲು ಮತ್ತು ರಾತ್ರಿ ಮಾಡಲಾಗುತ್ತಿದೆ.

3. ಅಪರಾಧಗಳನ್ನು ಎಸಗುವ ಎಂ.ಓ. ಕ್ರಿಮಿನಲ್ಸ್‌ಗಳ ಪತ್ತೆ ಹಚ್ಚಿ ಪ್ರಶ್ನಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

4. ನಾಕಾಬಂದಿ ಕಾರ್ಯಕ್ರಮ ನಡೆಸುತ್ತಿದ್ದು ಅಪರಾಧಿಗಳನ್ನು ಪತ್ತೆ ಹಚ್ಚಲಾಗುತ್ತಿದೆ.

5. ಹಿರಿಯ ನಾಗರೀಕರನ್ನು ಗುರುತಿಸಿ ಅವರ ಮನೆಗಳ ಬಳಿ ವಿಶೇಷ ಗಸ್ತು ವ್ಯವಸ್ಥೆ ಮಾಡಲಾಗಿದ್ದು ಈ ಬೀಟ್ ವ್ಯವಸ್ಥೆ ಹಾಕಲಾಗಿದೆ.

6. ರೌಡಿ ಚಟುವಟಿಕೆಗಳ ಮೇಲೆ ಸದಾ ನಿಗಾವಹಿಸಿ ಅವರಿಂದ ಯಾವುದೇ ಅಪರಾಧಗಳು ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

7. ಪೊಲೀಸ್ ಇನ್ಸ್‌ಪೆಕ್ಟರ್, ಎಸಿಪಿ. ಹಾಗೂ ಡಿಸಿಪಿ ರವರುಗಳಿಗೆ ಪ್ರತಿರಾತ್ರಿ ಸರದಿ ಮೇರೆಗೆ ರಾತ್ರಿಗಸ್ತು ನಡೆಯುತ್ತಿದೆ.

892(154) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ಪಟ್ಟಣದ ಹೊರ ವಲಯದಲ್ಲಿ ಅಕ್ರಮವಾಗಿ ಕಲ್ಲು ಬಂಡೆಯ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಇಲಾಖಾ ಮುಖ್ಯಸ್ಥರ ಗಮನಕ್ಕೆ ತಂದಿದ್ದರೂ, ನಿರ್ದೇಶಕರಿಗೆ ಪತ್ರ ಬರೆದಿದ್ದರೂ, ಕೂಡ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳದೆ ಇನ್ನೂ ಮುಂದುವರಿಸಿರುವುದಕ್ಕೆ ಕಾರಣಗಳೇನು;

ಇ) ಈ ಪ್ರದೇಶದಲ್ಲಿ ಕಂದಾಯ ಇಲಾಖೆ ಹಾಗೂ ಭೂವಿಜ್ಞಾನ ಇಲಾಖೆ ಜೊತೆಗೂಡಿ ಜಂಟಿ ಸರ್ವೆ ಕಾರ್ಯ ನಡೆಸಲು ಆದೇಶವಾಗಿದೆಯೇ; ಮಾಡದಿದ್ದಲ್ಲಿ, ಯಾವಾಗ ಮಾಡಲಾಗುವುದು; ಇನ್ನೂ ಸರ್ವೆ ಕಾರ್ಯ ನಡೆಸದಿರಲು ಕಾರಣಗಳೇನು;